
# ವ್ಯಥೆಗಳ ನಡುವೆ ಅರಳುವ ಕಥೆಗಳು

**‘ಡಂಕಲ್‌ಪೇಟೆ’** ಬಳ್ಳಾರಿಯ ವೀರೇಂದ್ರ ರಾವಿಹಾಳ್ ಅವರ ಚೊಚ್ಚಿಲ ಕಥಾಸಂಕಲನ. ಸಂಕಲನದ ಕಥೆಗಳ ಸಮಕಾಲೀನತೆಯನ್ನು ಸೂಚಿಸುವಂತಿರುವ ಕೃತಿಯ ಶೀರ್ಷಿಕೆ, ವರ್ತಮಾನಕ್ಕೆ ಸ್ಪಂದಿಸುವ ನಿಟ್ಟಿನಲ್ಲಿ ಕಥೆಗಾರ ಕಟ್ಟಿಕೊಂಡ ರೂಪಕದಂತೆಯೂ ಕಾಣಿಸುತ್ತದೆ; ಕಾಡುವ ಗುಣ ಹೊಂದಿದೆ.

ಸಂಕಲನದ ಮೊದಲ ಕಥೆಯಾದ ‘ದೊರೆ’ ಕೃತಿಯಲ್ಲಿನ ಒಳ್ಳೆಯ ಕಥೆಯೂ ಹೌದು. ಜೀವವನ್ನು ಉಳಿಸಿಕೊಳ್ಳಲಿಕ್ಕಾಗಿ ಮಹಾನಗರದಿಂದ ನೂರಾರು ಮೈಲು ದೂರದ ಹಳ್ಳಿಗೆ ಕಾಲ್ನಡಿಗೆಯಲ್ಲಿ ಪ್ರಯಾಣ ಕೈಗೊಳ್ಳುವ ಕುಟುಂಬವೊಂದರ ಸಂಕಷ್ಟಗಳ ಕಥನ ‘ದೊರೆ’ಯಲ್ಲಿದೆ. ಅಪ್ಪಅಮ್ಮನೊಂದಿಗೆ ಸದಾ ಕಣ್ಣಾಮುಚ್ಚಾಲೆಯಾಡುವ ತುಂಟ ಬಾಲಕ, ಹೆತ್ತವರಿಂದ ಶಾಶ್ವತವಾಗಿ ದೂರವಾಗುವ ದುರಂತದ ಕಥೆಯಿದು. ಈ ಮಗುವನ್ನು ಮಣ್ಣು ಮಾಡುವ ಸಂಕಟದೊಂದಿಗೆ ಕಥೆ ಕೊನೆಗೊಳ್ಳುವುದು. ಗಾದಿಲಿಂಗ ಹಾಗೂ ಮಾದೇವಿಯ ಕಣ್ಣಕುಡಿಯಾದ ದೊರೆಯೆಂಬ ಪುಟ್ಟ ಬಾಲಕ, ತನ್ನ ಬಾಲಲೀಲೆಗಳ ಮೂಲಕ ಕುಟುಂಬದ ಪ್ರೀತಿಗೂ ಕಾಳಜಿಗೂ ಪಾತ್ರನಾದವನು. ಬದುಕು ಉಳಿಸಿಕೊಳ್ಳಲಿಕ್ಕಾಗಿ ನಡೆಯುವ ಯಾತ್ರೆ, ಸಾವಿನಯಾತ್ರೆಯಾಗಿ ಪರಿಣಮಿಸುವ ದುರಂತ ಇಲ್ಲಿದೆ. ಅಳಿವು ಉಳಿವುಗಳ ತೂಗುಯ್ಯಾಲೆಯ ಯಾತ್ರೆಯ ಕಥೆಯನ್ನು ಕಥೆಗಾರ ಸಾಕಷ್ಟು ಸಂಯಮದಿಂದ ನಿರೂಪಿಸಿರುವುದು ಗಮನಾರ್ಹ. ಈ ನಡಿಗೆ ಒಂದು ಕುಟುಂಬದ್ದಲ್ಲ. ಅನಿರೀಕ್ಷಿತವಾಗಿ ಬದಲಾದ ಸಂದರ್ಭದಲ್ಲಿ ಅನ್ನದಪಾತ್ರೆಯಂತೆ ಪೊರೆಯುತ್ತಿದ್ದ ನೆಲೆ ಬೆಂಕಿಯ ಕುಲುಮೆಯಾಗಿ ಪರಿಣಮಿಸಿ, ನೂರಾರು ಕುಟುಂಬಗಳು ಊರಿನತ್ತ ಮುಖಮಾಡಿವೆ. ಭರವಸೆಗಳೆಲ್ಲ ಹುಸಿಯಾದ ಸಂದರ್ಭದಲ್ಲೂ, ನಡೆಯಲೇಬೇಕಾದ ದಾರಿ ಇಲ್ಲಿದೆ. ಈ ದುರ್ಭರ ಹಾದಿಯಲ್ಲಿ ಮಾನವೀಯತೆಯ ಸೆಲೆಗಳಂತೆ ಕೆಲವು ವ್ಯಕ್ತಿಗಳು ಶಂಕ್ರಜ್ಜನ ಕುಟುಂಬಕ್ಕೆ ಮುಖಾಮುಖಿಯಾಗುತ್ತಾರೆ. ಘನವಾದ ವ್ಯಕ್ತಿತ್ವದ ಈ ಮಾನವೀಯ ಒರತೆಗಳು ಕಥೆಯ ಆರ್ದ್ರತೆಯನ್ನು




ಹೆಚ್ಚಿಸಿವೆ. ತಾನೇ ಸಂಕಟದಲ್ಲಿದ್ದರೂ ನತದೃಷ್ಟ ಕುಟುಂಬದ ಸಂಕಟಕ್ಕೆ ಹೆಗಲಾಗುವ ಅಲ್ಲಾಭಕ್ಷಿ, ಕಥೆಯ ಚೌಕಟ್ಟನಾಚೆಗೂ ಬೆಳೆಯುತ್ತಾನೆ.

ಕೊರೊನಾ ಕಾಲಘಟ್ಟದ ದಾರುಣತೆಯನ್ನು ಚಿತ್ರಿಸುವ ಸಾಹಿತ್ಯಕೃತಿಗಳು ಕನ್ನಡದಲ್ಲಿ ತಕ್ಕಮಟ್ಟಿಗೆ ಬಂದಿದ್ದರೂ, ಅವು ಸಾಹಿತ್ಯಪ್ರಯೋಗಗಳಾಗಿ ಯಶಸ್ಸು ಕಂಡಿರುವುದು ವಿರಳ. ವರ್ತಮಾನದ ಸಂಕಷ್ಟವೊಂದು ವಾಚ್ಯವಾಗದೆ, ವರದಿಯ ಸ್ವರೂಪವಾಗಿಯಷ್ಟೇ ಉಳಿಯದೆ, ಕಲೆಯಾಗುವುದು ಹೇಗೆ ಎನ್ನುವುದಕ್ಕೆ ಉದಾಹರಣೆಯ ರೂಪದಲ್ಲಿ ‘ದೊರೆ’ ಕಥೆಯನ್ನು ಗಮನಿಸಬಹುದು. ಶೀರ್ಷಿಕೆಯಲ್ಲಷ್ಟೇ ಇರುವ ವ್ಯಂಗ್ಯ, ಕಥೆಯುದ್ದಕ್ಕೂ ಹಾಸುಹೊಕ್ಕಾಗಿರುವ ಅಸಹಾಯಕತೆ ಓದುಗರನ್ನು ತಲ್ಲಣಿಸುವಂತೆ ಮಾಡುತ್ತದೆ.

‘ದೊರೆ’ ಕಥೆಗೆ ಸಿಕ್ಕಿರುವ ಯಶಸ್ಸು ಸಂಕಲನದ